ಎಸ್ಸೈಆರ್ ಪರಿಶೀಲನೆ

ಮಂಡ್ಯ : ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯ ಜಿಲ್ಲೆಯಲ್ಲಿ ಚುರುಕು ಗೊಂಡಿದ್ದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಜಿಲ್ಲಾಧಿಕಾರಿ ಡಾ.ಕುಮಾರ ಹಾಗೂ ಜಿ.ಪಂ. ಸಿಇಓ ಕೆ.ಆರ್. ನಂದಿನಿ ಶ್ರೀರಂಗಪಟ್ಟಣದ ಬಾಬುರಾಯನಕೊಪ್ಪಲಿನ ಮನೆ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿ.ಎಲ್.ಒ.) ಜು.29 ರವರೆಗೆ ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಎಣಿಕೆ ನಮೂನೆಗಳನ್ನು ವಿತರಿಸುತ್ತಿದ್ದಾರೆ. ಬಿ.ಎಲ್.ಒ.ಗಳು ಭೇಟಿ ನೀಡಿದ ಸಂದರ್ಭದಲ್ಲಿ ಮತದಾರರು ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ನಮೂನೆಗಳನ್ನು ಹಿಂತಿರುಗಿಸಿ ಸಹಕರಿಸಬೇಕು" ಎಂದು ಮನವಿ ಮಾಡಿದರು.

ಮಧ್ಯವರ್ತಿಗಳ ಹಾವಳಿಗೆ ಕಡಿವಾಣ । ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಕಾರ್ಯಕರ್ತರಿಂದ ಆಗ್ರಹ

ವಿವಿಧ ಬೇಡಿಕೆ ಈಡೇರಿಕೆಗೆ ತಹಶೀಲ್ದಾರ್‌ಗೆ ಮನವಿ

ಸಂ.ಕ.ಸಮಾಚಾರ, ಮದ್ದೂರು

ತಾಲೂಕಿನಾದ್ಯಂತ ಸರ್ಕಾರಿಭೂಮಿ, ಗೋಮಾಳ ಹಾಗೂ ಮುಜಾರಾಯಿ ಇಲಾಖೆಗೆ ಸೇರಿದ ಆಸ್ತಿಗಳ ಮೇಲಿನ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ಕಾರ್ಯಕರ್ತರು ಶುಕ್ರವಾರ ತಾಲೂಕು ಕಚೇರಿಯಲ್ಲಿ ನೂತನ ತಹಸೀಲ್ದಾರ್ ಡಾ.ಶಿವಕುಮಾರ ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ವೇದಿಕೆಯ ಜಿಲ್ಲಾಧ್ಯಕ್ಷ ವಿ.ಸಿ.ಉಮಾಶಂಕರ್ ಮಾತನಾಡಿ, ಕೋಟ್ಯಂತರ ರೂಪಾಯಿ ಮೌಲ್ಯದ ಸರ್ಕಾರಿ ಜಮೀನುಗಳು ಒತ್ತುವರಿಯಾಗಿರುವುದನ್ನು ತಾಲೂಕು ಆಡಳಿತ ಗಂಭೀರವಾಗಿ ಪರಿಗಣಿಸಿ ತುರ್ತು ಸರ್ವೇ ನಡೆಸಿ ಸರ್ಕಾರದ ವಶಕ್ಕೆ ಪಡೆಯುವಂತೆ ಒತ್ತಾಯಿಸಿದರು.

ತಾಲೂಕು ಕಚೇರಿಯ ಆರ್‌ಆರ್, ಸರ್ವೇ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸಾರ್ವಜನಿಕರ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಆರೋಪಿಸಿದರು.

ತಾಲೂಕು ಕಚೇರಿ ಆವರಣದಲ್ಲಿ ಸುಸಜ್ಜಿತ ಶೌಚಾಲಯ, ವಾಹನ ನಿಲುಗಡೆ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಮನವಿ ಮಾಡಿದರು. ಜೊತೆಗೆ ಹಣ ಪಡೆದು ಸರ್ಕಾರಿ ಕೆಲಸ ಮಾಡಿಸಿಕೊಡುವ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕುವಂತೆ ಒತ್ತಾಯಿಸಿದರು.

ತಾಲೂಕಿನ ಶಿಂಷಾನದಿ ಪಾತ್ರದಲ್ಲಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆಯನ್ನು ತಡೆಯಲು ತಾಲೂಕು ಆಡಳಿತ ಹಾಗೂ ಸಂಬಂಧಿತ ಅಧಿಕಾರಿಗಳುಪ್ರಾಮಾಣಿಕವಾಗಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಇದೇ ವೇಳೆ ಶುಕ್ರವಾರ ನೂತನ ತಹಸೀಲ್ದಾರ್‌ಆಗಿ ಅಧಿಕಾರ ಸ್ವೀಕರಿಸಿದ ಡಾ.ಶಿವಕುಮಾರಬಿರಾದಾರ ಅವರನ್ನು ವೇದಿಕೆ ವತಿಯಿಂದ ಅಭಿನಂದಿಸಿ ಗೌರವಿಸಲಾಯಿತು.

ಮನವಿ ಸ್ವೀಕರಿಸಿದ ತಹಸೀಲ್ದಾರ್ ಡಾ.ಶಿವಕುಮಾರ ಬಿರಾದಾರ ಮಾತನಾಡಿ, "ಇಂದು ಹೊಸದಾಗಿ ಅಧಿಕಾರ ಸ್ವೀಕರಿಸಿದ್ದೇನೆ. ಸಾರ್ವಜನಿಕರ ಸಮಸ್ಯೆಗಳನ್ನು ಆದ್ಯತೆ ಮೇರೆಗೆಪರಿಶೀಲಿಸಿ, ಹಂತಹಂತವಾಗಿ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ" ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಸಿ.ಲಿಂಗರಾಜು, ತಾಲೂಕು ಅಧ್ಯಕ್ಷ ತಿಪ್ಪೂರು ರಾಜೇಶ್, ಯುವಘಟಕದ ಅಧ್ಯಕ್ಷ ವಿ.ಪಿ.ವಿಶ್ವಾಸ್, ಸಂಘಟನಾ ಕಾರ್ಯದರ್ಶಿಗಳಾದ ಅಜ್ಜಹಳ್ಳಿ ಕರಿಗೌಡ, ವಿ.ಪಿ.ವರದರಾಜು, ವಿ.ಬಿ.ಸದಾನಂದ, ಬೋರಾಪುರ ಸಿದ್ದರಾಮ, ಮುಖಂಡರಾದ ಕಲ್ಯಾಣಿ, ರಾಮಣ್ಣ, ವೀರಭದ್ರಚಾರಿ, ಜಿಲ್ಲಾ ರೈತ ಮುಖಂಡ ಕುದುರಗುಂಡಿ ನಾಗರಾಜು, ಚೇತನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

> ತಾಲೂಕು ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ವಾಸಿಸದೆ ಬೇರೆಡೆಯಿಂದ ಕರ್ತವ್ಯಕ್ಕೆ ಆಗಮಿಸುತ್ತಿರುವುದರಿಂದ ಸಾರ್ವಜನಿಕರು ಹಾಗೂ ರೈತರ ಕೆಲಸಗಳಿಗೆ ವಿಳಂಬವಾಗುತ್ತಿದೆ. ಆದ್ದರಿಂದ ಎಲ್ಲ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲೇ ವಾಸಿಸುವಂತೆ ಆದೇಶ ನೀಡಬೇಕು
> ■ ಹೋರಾಟಗಾರರು,

ಕೆಂಪೇಗೌಡ ಜಯಂತಿ ಆಚರಣೆ

ಸೆಸ್ಕಾಂ ನೌಕರರಿಂದ ಗಿಡ ನೆಡುವ, ವಿತರಣೆ ಕಾರ್ಯಕ್ರಮ

ಭಾರತೀನಗರ: ಜಿಲ್ಲೆಯಲ್ಲೇ ಮೊದಲ ಭಾರಿಗೆ ಸೆಸ್ಕಾಂ ನೌಕರರ ಸಂಘದ ವತಿಯಿಂದ ಗಿಡಗಳನ್ನು ನೆಡುವ ಮತ್ತು ವಿತರಣೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇದರಿಂದ ಪರಿಸರ ಸಂರಕ್ಷಣೆಯು ಆಗುತ್ತದೆ ಎಂದು ಸೆಸ್ಕಾಂ ನೌಕರರ ಸಂಘದ ಅಧ್ಯಕ್ಷ ಕೆ.ಎ.ಸುರೇಶ್ ತಿಳಿಸಿದರು.

ಭಾರತೀನಗರ ಸೆಸ್ಕಾಂ ಕಚೇರಿಯಲ್ಲಿ ಆಯೋಜಿಸಿದ್ದ ನೌಡಪ್ರಭು ಕೆಂಪೇಗೌಡ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಗಿಡಗಳನ್ನು ವಿತರಿಸಿ ಅವರು ಮಾತನಾಡಿದರು.

ಸೆಸ್ಕಾಂ ನೌಕರರು ವಿದ್ಯುತ್ ತಂತಿಗಳಿಗೆ ತಗಲುವ ಮರಗಿಡಗಳನ್ನು ಅನಿವಾರ್ಯವಾಗಿ ಸಾರ್ವಜನಿಕರ ಹಿತ ದೃಷ್ಟಿಯಿಂದ ಕಡಿದು ಹಾಕಲಾಗುತ್ತಿದೆ. ಹಾಗಾಗಿ ನಮ್ಮ ನೌಕರರಿಂದಲೇ ಗಿಡಗಳನ್ನು ನೆಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ .

ನಾಡಪ್ರಭು ಕೆಂಪೇಗೌಡರು ನಿಶ್ವಾರ್ಥ ಸೇವೆಯಿಂದ ಸಮಾಜವನ್ನು ಕಟ್ಟಿದ್ದಾರೆ. ಅವರ ಕೊಡುಗೆ ಅನನ್ಯ. ಅವರ ಆದರ್ಶಗಳನ್ನು ನಾವು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಸಂಘದ ತಾಲ್ಲೂಕು ಕಾರ್ಯದರ್ಶಿ ಶ್ರೀಧರ್ ಮಾತನಾಡಿ, ಕೆಂಪೇಗೌಡರು ಪರಿಸರದ ಬಗ್ಗೆಯೂ ಕಾಳಜಿ ಹೊಂದಿದವರು. ನಮ್ಮ ನೌಕರರು ಯಾವುದೇ ಉದ್ದೇಶಪೂರಕವಾಗಿ ಗಿಡಮರಗಳನ್ನು ನಾಶಪಡಿಸಿಲ್ಲ. ಅದು ಸಾರ್ವಜನಿಕರ ಒಳಿತಿಗಾಗಿ. ಇದರ ಪ್ರತಿಯಾಗಿ ಒಬ್ಬರು 10 ಗಿಡಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ನೌಕರರ ಸಂಘದ ಕೇಂದ್ರ ಸಮಿತಿ ಸದಸ್ಯ ಮಹದೇವ, ಶಾಖಾಧಿಕಾರಿಗಳಾದ ಹನುಮಂತಯ್ಯ, ಸುಧಾಕರ್, ನೌಕರರಾದ ಅನೀಲ್, ಶಿವರಾಜು, ಚನ್ನೇಗೌಡ, ನವೀನ, ತಿಮ್ಮೇಗೌಡ, ಶಿವರಾಜು, ಶಿವಶಂಕರ, ಗುತ್ತಿಗೆದಾರ ಅಣ್ಣೂರು ಸಿದ್ದರಾಮು, ಮಂಜುನಾಥ್ ಸೇರಿದಂತೆ ಹಲವರಿದ್ದರು.

ಸತತ ಪರಿಶ್ರಮದಿಂದ ಯಶಸ್ಸು ಸಾಧ್ಯ

ಸಂ.ಕ.ಸಮಾಚಾರ,ಬೆಳಕವಾಡಿ

ವಿದ್ಯಾರ್ಥಿಗಳು ಸತತ ಪರಿಶ್ರಮದಿಂದ ಓದಿದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದು ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪ್ರಸನ್ನ ಕುಮಾರ್ ರವರು ತಿಳಿಸಿದರು.

ತಾಲೂಕಿನ ಬಿಜಿಪುರ ಹೋಬಳಿಯ ಸರಗೂರು ಹ್ಯಾಂಡ್ ಪೋಸ್ಟ್ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶುಕ್ರವಾರ ನಡೆದ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಸಮಾರಂಭ ಹಾಗೂ ಹಿರಿಯ ವಿದ್ಯಾರ್ಥಿಗಳಿಂದ ಕಿರಿಯ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ನೋಟ್ ಪುಸ್ತಕ, ಸಮವಸ್ತ್ರ ವಿತರಣೆ, ಸರ್ಕಾರಿ ಸುಂಕಪಾವತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗುರುಗಳು ಹೇಳಿಕೊಟ್ಟ ಪಾಠ ಪ್ರವಚನಗಳನ್ನು ಶ್ರದ್ಧೆಯಿಂದ ಓದಬೇಕು. ಮನೆಗೆ ಹೋದ ಬಳಿಕ ಅಂದಿನ ಪಾಠವನ್ನು ಮನನ ಮಾಡಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರ ಬರುವವರೆಗೂ ಉದಾಸೀನತೆಯಿಂದ ನಡೆದುಕೊಳ್ಳುತ್ತಾರೆ. ಪರೀಕ್ಷೆ ಸಮೀಪಿಸಿದಾದ ಪುಸ್ತಕ ಹಿಡಿದು ಓದಲು ಮುಂದಾಗುತ್ತಾರೆ. ಇದು ಒಳ್ಳೆಯದಲ್ಲ. ನೂರಕ್ಕೆ ನೂರರಷ್ಟು ಫಲಿತಾಂಶಕ್ಕೆ ಶ್ರಮಿಸಿ ಓದಬೇಕು, ನಿಮ್ಮ ತಂದೆ ತಾಯಿ, ನಿಮ್ಮ ಊರಿಗೆ ಕೀರ್ತಿ ತರುವಂತಾಗಬೇಕು ಎಂದು ತಿಳಿಸಿದರು,

ಎರಡನೇ ಉಪಜಿಲ್ಲಾ ರಾಜ್ಯಪಾಲರು ಲಯನ್ ಎನ್. ಸಿದ್ದೇಗೌಡ ಮಾತನಾಡಿ, ಈ ಹಿಂದೆ ನಾವು ವಿದ್ಯಾಭ್ಯಾಸ ಮಾಡುವ ವೇಳೆ ಸುಮಾರು ಐದರಿಂದ ಆರು ಕಿಲೋಮೀಟರ್ ದೂರ ನಡೆದುಕೊಂಡು ಶಾಲೆಗೆ ಹೋಗುತ್ತಿದ್ದೇವು. ಅಂದು ನಾವು ಪಟ್ಟಂತಹ ಶ್ರಮದ ಫಲದಿಂದಲೇ ಇಂದು ಉನ್ನತ ಹುದ್ದೆಯಲ್ಲಿದ್ದೇವೆಎಂದರು.

ನೂರಕ್ಕೆ ನೂರರಷ್ಟು ಫಲಿತಾಂಶ ಬರಲು ಶ್ರಮಿಸಿದ ಉಪನ್ಯಾಸಕರನ್ನು ಹಾಗೂ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರಾಂಶುಪಾಲರು ಸನ್ಮಾನಿಸಿದರು.

ಮೈಸೂರು ಲಿಯೋ ಕ್ಲಬ್ ನ ಜಿಲ್ಲಾಧ್ಯಕ್ಷ ಬಿ.ಜೆ. ಮನು, ಕಾಲೇಜು ಅಭಿವೃದ್ಧಿ ಸಮಿತಿಯಉಪಾಧ್ಯಕ್ಷ ಬಿ.ಕುಮಾರಸ್ವಾಮಿ, ಮಂಡ್ಯಪ್ರಾಂಶುಪಾಲರಾದ ಗುರುಲಿಂಗೇಗೌಡ, ಉಪನ್ಯಾಸಕರಗಳಾದ ಡಾ.ಎನ್. ಕೃಷ್ಣಪ್ಪ, ಎಸ್.ಜಯಶ್ರೀ, ವಿ.ಗಿರಿಧರ, ಎಸ್.ದೇವರಾಜು, ಕುಂದೂರ್ ನಾಯಕ್, ಶೋಭಾ, ಲೋಕೇಶ್ ಕುಮಾರ್, ಸಿ.ಬಿ.ಯಯುನ, ಹೇಮಾ, ವಿ.ವೈ.ಜ್ಯೋತಿಲಕ್ಷ್ಮಿ, ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

> ಪ್ರಾಂಶುಪಾಲರಾದ ಹನುಮಂತಯ್ಯ ಬರೀ ಪಾಠ ಮಾಡಬಹುದಾಗಿತ್ತು ಆದರೆ ಗ್ರಾಮೀಣ ಪ್ರದೇಶ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ದಾನಿಗಳ ಸಹಾಯ ಪಡೆದು ನೋಟ್ ಪುಸ್ತಕ, ಸಮವಸ್ತ್ರಗಳನ್ನು ಉಚಿತವಾಗಿ ಕೊಡಿಸುತ್ತಿದ್ದಾರೆ, ನೀವು ಸಹ ಇದರ ಉಪಯೋಗವನ್ನು ಪಡೆದುಕೊಂಡು ಉನ್ನತ ಅಧಿಕಾರಿಗಳಾಗಿ ಬಡ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದ ಸೇವೆ ಮಾಡಿ

ಲೋಕಾಯುಕ್ತ ತಂಡದಿಂದ ಕಚೇರಿ ದಾಖಲೆ ಪರಿಶೀಲನೆ

ಸರಕಾರಿ ಜಮೀನಿಗೆ ಸಂಬಂಧಿಸಿದ ಅಕ್ರಮ ದಾಖಲೆಗಳ ಕುರಿತು ಕೂಲಂಕುಷ ವೀಕ್ಷಣೆ

ಪಾಂಡವಪುರ : ಸರಕಾರಿ ಜಾಗವನ್ನು ಅಕ್ರಮವಾಗಿ ಖಾಸಗಿ ಧಾರ್ಮಿಕ ಸಂಸ್ಥೆಗೆ ಮಾರಾಟ ಮಾಡಿರುವ ವಿಚಾರವಾಗಿ ಲೋಕಾಯುಕ್ತ ಪೊಲೀಸರ ತಂಡ ಉಪವಿಭಾಗಾಧಿಕಾರಿಗಳ ಕಚೇರಿಗೆ ಶುಕ್ರವಾರ ಭೇಟಿಕೊಟ್ಟು ದಾಖಲೆಗಳನ್ನು ಪರಿಶೀಲನೆ ನಡೆಸಿದರು.

ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಗ್ರಾಮದ ಸರ್ವೇ ನಂ.411ರಲ್ಲಿ ಇರುವ ಸರಕಾರಕ್ಕೆ ಸೇರಿದ ಸರಕಾರಿ ಜಮೀನಿನನ್ನು ಅಕ್ರಮವಾಗಿ ಧಾರ್ಮಿಕ ಸಂಸ್ಥೆ(ಇಸ್ಕಾನ್)ಗೆ ಮಾರಾಟ ಮಾಡಿರುವ ಸಂಬಂಧ ಉಪ ಲೋಕಾಯುಕ್ತರಿಗೆ ದೂರು ಸಲ್ಲಿಸಿಕೆಯಾಗಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳ ತಂಡ ಪಾಂಡವಪುರ ಉಪವಿಭಾಗಾಧಿಕಾರಿಗಳ ಕಚೇರಿಗೆ ಭೇಟಿ ಮಾಡಿ ಮಾರಾಟ ಮಾಡಲಾಗಿರುವ ಸರಕಾರಿ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹದೇವಪುರ ಗ್ರಾಪಂ, ಶ್ರೀರಂಗಪಟ್ಟಣ ಪಟ್ಟಣದ ತಾಲೂಕು ಕಚೇರಿಗೆ ಭೇಟಿಕೊಟ್ಟು ಪರಿಶೀಲನೆ ನಡೆಸಿದ್ದರು. ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಅಧಿಕಾರಿಗಳು ತಂಡ ಭೇಟಿಕೊಟ್ಟು ಮೂರು ಗಂಟೆಗೂ ಅಧಿಕಕಾಲ ಸುದೀರ್ಘವಾಗಿ ಪರಿಶೀಲ ನಡೆಸಿದರು.

ಪರಿಶೀಲನೆ ವೇಳೆ ಲೋಕಾಯುಕ್ತ ಇನ್ಸ್‌ಪೆಕ್ಟರ್ ಲೇಪಾಕ್ಷಮೂರ್ತಿ, ಸಿಬ್ಬಂದಿಗಳಾ ದಿನೇಶ್, ರಾಮಲಿಂಗ, ಯೋಗೇಶ್ ಇದ್ದರು.



ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: SBC-KVLRRMGM-SET
ದಿನಾಂಕ: 30.06.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗಲ್ಲಿ 1) ಕರುವಳ್ಳಿ (ಕೆವಿಎಲ್‌ಆರ್) ನಿಲ್ದಾಣದಲ್ಲಿ ಅಸ್ತಿತ್ವದಲ್ಲಿರುವ ಹಿತಾಚಿಯ ಇಬಗೆ ಅವಶ್ಯಕ ಮಾರ್ಪಾಡುಗಳೊಂದಿಗೆ ಹೆಚ್ಚುವರಿ ಲೂಪ್ ಲೈನಿನ ವ್ಯವಸ್ಥೆ. 2) ರಾಮನಗರಂ (ಆರ್‌ಎಂಜಿಎಂ) ಮತ್ತು ಶೆಟ್ಟಿಹಳ್ಳಿ (ಎಸ್‌ಇಟಿ) ನಿಲ್ದಾಣಗಳಲ್ಲಿ ಅಸ್ತಿತ್ವದಲ್ಲಿರುವ ಹಿತಾಚಿಯ ಇಬಗೆ ಅವಶ್ಯಕ ಮಾರ್ಪಾಡುಗಳೊಂದಿಗೆ ಡ್ಯುವಲ್ ವಿಡಿಯಿನ ವ್ಯವಸ್ಥೆ.	ರೂ. 4,65,16,502.70/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.07.2026, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಬೆಂಗಳೂರು

PUB/257/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ಯು.ಆರ್. ರಾವ್ ಉಪಗ್ರಹ ಕೇಂದ್ರ
ಹೆಜ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ, ವಿಮಾನಪುರ ಪೋಸ್ಟ್, ಬೆಂಗಳೂರು - 560017.
ನಿರ್ಮಾಣ ಮತ್ತು ನಿರ್ವಹಣಾ ಸಮೂಹ,
(ದೂರವಾಣಿ : 080 25084168, 4175, 4195), (ಫ್ಯಾಕ್ಸ್ : 080 25084155)
ಸಂಕ್ಷಿಪ್ತ ತಿದ್ದುಪಡಿ ಪ್ರಕಟಣೆ

1. ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕಾಮಗಾರಿಗೆ ಐಟಂ ದರ ಟೆಂಡರ್ ಆಹ್ವಾನಿಸಲಾಗಿದೆ.

ವಿವರಣೆಗಳು	ವಿವರಗಳು
ಕೆಲಸದ ಹೆಸರು	ಬೆಂಗಳೂರಿನ ಯುಆರ್‌ಎಸ್‌ಸಿ ಸಂಸ್ಥೆಯ ಪ್ರಧಾನ ಕ್ಯಾಂಪಸ್ ಮತ್ತು ಐ.ಎಸ್.ಐ.ಟಿಇ. ಕ್ಯಾಂಪಸ್‌ನಲ್ಲಿ ವಿವಿಧ ರೀತಿಯ ವರ್ ಕಂಡಿಷನಿಂಗ್ ಕಾಮಗಾರಿ.
ಇ-ಟೆಂಡರ್ ನೋಟೀಸ್ ನಂ.	URSC/C and MG/ACMD/0053/ETN-01/2026-27 Dt. 11.06.2026
ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ	₹ 23.99 ಲಕ್ಷಗಳು
ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ.	ದಿನಾಂಕ : 06.07.2026 ರಂದು 23:59 ಗಂಟೆಯವರೆಗೆ ವಿಸ್ತರಣೆ
ಮುಂಗಡ ಹಣ ಠೇವಣಿ (ಇ.ಎಂ.ಡಿ.)	ರೂ. 47,980/- (180 ದಿನಗಳ ಮಾನ್ಯವಾಗಿದೆ)

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ವೆಬ್‌ಸೈಟ್ : www.isro.gov.in ನಲ್ಲಿ ಹಿಂದಿ ಆವೃತ್ತಿಯೊಂದಿಗೆ ವಿವರವಾದ ಇ-ಟೆಂಡರ್ ಆಹ್ವಾನ ಪ್ರಕಟಣೆ (NIET) ಅನ್ನು ದಯವಿಟ್ಟು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಸಮೂಹ ನಿರ್ದೇಶಕರು, (ನಿರ್ಮಾಣ & ನಿರ್ವಹಣೆ ಸಮೂಹ)

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು

ಜಾಹೀರಾತಿಗಾಗಿ ಸಂಪರ್ಕಿಸಿ : Mobile : 9902008429
E-mail : skadvtblr@gmail.com

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಕಿರಿಯ ಶ್ರೇಣಿ), ಮಂಡ್ಯ
ಜಾರಿ ಅರ್ಜಿ ಸಂಖ್ಯೆ:03/2026

ಡಿಕ್ರಿದಾರಕರುಗಳು : 1.ಬೋರಲಿಂಗೇಗೌಡ ಬಿನ್ ಲೇಟ್ ನಿಂಗಯ್ಯ ಉಃಃ ಮೂಗಯ್ಯ ವಯಸ್ಸು 72 ವರ್ಷಗಳು 2. ಕೆಂಪೇಗೌಡ ಬಿನ್ ಲೇಟ್ ನಿಂಗಯ್ಯ ಉಃಃ ಮೂಗಯ್ಯ ವಯಸ್ಸು 61 ವರ್ಷಗಳು 1 ಮತ್ತು 2ನೇ ಡಿಕ್ರಿದಾರರುಗಳ ವಾಸ : ಶಂಭೂನಹಳ್ಳಿ ಗ್ರಾಮ, ದುದ್ದ ಹೋಬಳಿ ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.

-ವಿರುದ್ಧ-

ತೀರ್ಪುಋಣಿಗಳು : 1. ಜೆ.ಎಲ್.ಸುನಂದ ಮತ್ತು